**(11) ದೇಹದಾರ್ಢ್ಯತೆ :–**

ಜೈಲರ್ ಮತ್ತು ವಾರ್ಡರ್ ಹುದ್ದೆಗೆ ಸಂಬಂಧಿಸಿದಂತೆ ಈ ಕೆಳಗಿನ ದೇಹದಾರ್ಢ್ಯತೆ ಹೊಂದಿದವರು ಮಾತ್ರ ಅರ್ಜಿ ಸಲ್ಲಿಸಬೇಕು. ಅಲ್ಲದೆ ಅಭ್ಯರ್ಥಿಗಳು ಸದರಿ ಪರೀಕ್ಷೆಗೆ ಬರುವಾಗ, ಕರೆಪತ್ರವನ್ನು ಇಲಾಖೆಯ ವೆಬ್ ಸೈಟ್‌ನಿಂದ ಡೌನ್‌ಲೋಡ್ ಮಾಡಿ ಅದರ ಜೊತೆಗೆ ಈ ಕೆಳಕಂಡ ಯಾವುದಾದರೊಂದು ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.

1. ಪಾಸ್‌ಪೋರ್ಟ್ (Passport)
2. ಚಾಲನಾ ಪರವಾನಗಿ ಪತ್ರ (Driving License)
3. ಪ್ಯಾನ್ ಕಾರ್ಡ್ (PAN Card)
4. ರಾಜ್ಯ ಸರ್ಕಾರ/ ಕೇಂದ್ರ ಸರ್ಕಾರ/ ಸಾರ್ವಜನಿಕ ಸ್ವಾಮ್ಯದ ಅಥವಾ ಸರ್ಕಾರದ ಅಧೀನಕ್ಕೊಳಪಟ್ಟ ಖಾಸಗೀ ಕಂಪನಿಗಳು ವಿತರಿಸಿರುವ ಭಾವಚಿತ್ರವಿರುವ ಸೇವಾ ಗುರುತಿನ ಚೀಟಿ (Service ID Card)
5. ಸಾರ್ವಜನಿಕ ಬ್ಯಾಂಕುಗಳು/ಅಂಚೆ ಕಛೇರಿಗಳು ವಿತರಿಸಿರುವ ಭಾವಚಿತ್ರವಿರುವ ಪಾಸ್ ಪುಸ್ತಕ (Bank Pass Book with Photograph)
6. ಭಾವಚಿತ್ರ ಸಮೇತ ನೋಂದಣಿಯಾಗಿರುವ ಸ್ವತ್ತಿನ ದಾಖಲೆಪತ್ರ ಅಥವಾ ಪಟ್ಟಾ ಪುಸ್ತಕ (Pattas and registered deeds with Photograph)
7. ಭಾವಚಿತ್ರ ಸಮೇತ ಸಂಬಂಧಪಟ್ಟ ಪ್ರಾಧಿಕಾರಿಯವರು ವಿತರಿಸಿರುವ ಜಾತಿ ಪ್ರಮಾಣ ಪತ್ರ (Caste Certificate with Photo)
8. ಮಾಜಿ ಸೈನಿಕ ಅಭ್ಯರ್ಥಿಗಳಿಗೆ ವಿತರಿಸಿರುವ ಪಿಂಚಣಿ ಪುಸ್ತಕ/ಪಿಂಚಣಿ ಮಂಜೂರಾತಿ ಆಗಿರುವ ಆದೇಶ (Ex-servicemen’s pension book/pension payment order)
9. ಎನ್.ಆರ್.ಇ.ಜಿ.ಎಸ್.ಯಿಂದ ನೀಡಿದ ಭಾವಚಿತ್ರವಿರುವ ಉದ್ಯೋಗ ಚೀಟಿ. (Job cards with Photograph)
10. ಎಲೆಕ್ಟ್ರೋರಲ್ ಫೋಟೋ ಗುರುತಿನ ಚೀಟಿ (EPIC).
11. ಭಾರತೀಯ ಗುರುತು ಪ್ರಾಧಿಕಾರದಿಂದ ನೀಡಲಾಗಿರುವ ಆಧಾರ್ ಕಾರ್ಡ್. (AADHAR CARD).

**ದೇಹದಾರ್ಢ್ಯತೆ ಪರೀಕ್ಷೆ:–**

| ಅಳತೆ | ಪುರುಷ ಅಭ್ಯರ್ಥಿಗಳಿಗೆ | ಮಹಿಳಾ ಅಭ್ಯರ್ಥಿಗಳಿಗೆ |
|---|---|---|
| ಎತ್ತರ | 168 ಸೆಂ.ಮೀ., | 157 ಸೆಂ.ಮೀ., |
| ಎದೆ ಸುತ್ತಳತೆ | ಪೂರ್ಣ ಉಸಿರೆಳೆದಾಗ ಎದೆಯ ಸುತ್ತಳತೆ ಕನಿಷ್ಟ 86 ಸೆ.ಮೀ. ಗಳಷ್ಟಿದ್ದು ಕನಿಷ್ಟ 5 ಸೆ.ಮೀ. ಗಳಷ್ಟು ವಿಸ್ತರಣೆ ಹೊಂದಿರಬೇಕು. | ಅನ್ವಯಿಸುವುದಿಲ್ಲ |
| ತೂಕ | ಅನ್ವಯಿಸುವುದಿಲ್ಲ. | 46 ಕೆ.ಜಿ. |
| ದೃಷ್ಟಿ | | |

| | |
|---|---|
| | **ಉತ್ತಮ** **ಕನಿಷ್ಟ**<br>1. ದೂರದೃಷ್ಟಿ 6/9 ಅಥವಾ 6/9<br>6/9 6/12<br>2. ಸಮೀಪ ದೃಷ್ಟಿ 0/6 0/8<br>ಪ್ರತಿ ಕಣ್ಣು ಸಂಪೂರ್ಣ ಕ್ಷೇತ್ರ ದೃಷ್ಟಿ ಹೊಂದಿರಲೇಬೇಕು. ವರ್ಣಾಂಧತೆ, ಮೆಳ್ಳಗಣ್ಣು ಅಥವಾ ಯಾವುದೇ ಕಣ್ಣಿನ ಅಥವಾ ರೆಪ್ಪೆಯ ವಿಕೃತ ಸ್ಥಿತಿಯನ್ನು ಅನರ್ಹತೆ ಎಂದು ಪರಿಗಣಿಸಲಾಗುವುದು. |
| ಶ್ರವಣ ಶಕ್ತಿ | (1) ರಿನ್ನೇಸ್ ಪರೀಕ್ಷೆ (2) ವೆಬ್ಬರ್ಸ್ ಪರೀಕ್ಷೆ (3) ವೆರ್ಟಿಗೋ ಪರೀಕ್ಷೆ .<br>ಮೇಲಿನ ಪರೀಕ್ಷೆಗಳಲ್ಲಿ ಯಾವುದೇ ನ್ಯೂನತೆಗಳು ಕಂಡುಬಂದಲ್ಲಿ ಅನರ್ಹತೆ ಎಂದು ಪರಿಗಣಿಸಲಾಗುವುದು. |

**ಕೆಳಕಂಡವುಗಳು ದೈಹಿಕ ಅನರ್ಹತೆಗಳಾಗಿರುತ್ತವೆ:**

- ತಾಗುಮಂಡಿ (Knock-Knees)
- ಬಾಗಿದ ಕಾಲುಗಳು (Bow legs)
- ಚಪ್ಪಟೆ ಪಾದ (flat feet)
- ಅಪಧಮನಿ ಊತ (Varicose veins)
- ಮಾತಿನಲ್ಲಿ ಅಡಚಣೆ (ಗುಕ್ಕಿಸುವುದು) (Speech impediment).

**(12) <u>ದೇಹದಾರ್ಢ್ಯತೆ ಪರೀಕ್ಷೆಯಲ್ಲಿ ಅರ್ಹರಾದ ಅಭ್ಯರ್ಥಿಗಳಿಗೆ ಈ ಕೆಳಕಂಡಂತೆ ದೈಹಿಕ ಸಾಮರ್ಥ್ಯ ಪರೀಕ್ಷೆಯನ್ನು ನಡೆಸಲಾಗುವುದು.</u>**

(ಎ) **<u>ದೈಹಿಕ ಸಾಮರ್ಥ್ಯ ಪರೀಕ್ಷೆ :-</u>**

**ಪುರುಷ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ**

| **ಅಂಶಗಳು** | **ಅರ್ಹತಾ ವೇಳೆ / ದೂರ** |
|---|---|
| 100 ಮೀಟರ್ ಓಟ | 15 ಸೆಕೆಂಡುಗಳು |
| ಎತ್ತರ ಜಿಗಿತ (High jump) | 1.20 ಮೀಟರ್ |
| ಉದ್ದ ಜಿಗಿತ (Long jump) | 3.80 ಮೀಟರ್ |
| ಗುಂಡೆಸೆತ (7.26 ಕಿಲೋ) (Shot put) | 5.60 ಮೀಟರ್ |
| 800 ಮೀಟರ್ ಓಟ | 2 ನಿಮಿಷ 50 ಸೆಕೆಂಡುಗಳು |

**ಮಹಿಳಾ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ**

| **ಅಂಶಗಳು** | **ಅರ್ಹತಾ ವೇಳೆ / ದೂರ** |
|---|---|
| 100 ಮೀಟರ್ ಓಟ | 18.5 ಸೆಕೆಂಡುಗಳು |
| ಎತ್ತರ ಜಿಗಿತ (High jump) | 0.90 ಮೀಟರ್ |
| ಉದ್ದ ಜಿಗಿತ (Long jump) | 2.50 ಮೀಟರ್ |
| ಗುಂಡೆಸೆತ (3.63 ಕಿಲೋ) (Shot put) | 3.75 ಮೀಟರ್ |

| | |
|---|---|
| 200 ಮೀಟರ್ ಓಟ | 40 ಸೆಕೆಂಡುಗಳು |

ಅಭ್ಯರ್ಥಿಗಳು ಮೇಲಿನ **5** ದೈಹಿಕ ಸಾಮರ್ಥ್ಯ ಪರೀಕ್ಷೆಗಳ ಪೈಕಿ, ಕನಿಷ್ಠ **3** ರಲ್ಲಿ ಉತ್ತೀರ್ಣರಾಗಬೇಕು. ದೈಹಿಕ ಸಾಮರ್ಥ್ಯ ಪರೀಕ್ಷೆಗೆ ಅಂಕಗಳನ್ನು ನೀಡಲಾಗುವುದಿಲ್ಲ. ಇವು ಕೇವಲ ಅರ್ಹತೆಗೆ ಮಾತ್ರ ಸೀಮಿತವಾಗಿರುತ್ತದೆ.

**ಟಿಪ್ಪಣಿ : ದೈಹಿಕ ಸಾಮರ್ಥ್ಯ ಹಾಗೂ ದೇಹದಾರ್ಢ್ಯತೆ ಪರೀಕ್ಷೆಯನ್ನು ಒಂದು ಸಮಿತಿಯು ನಡೆಸುವುದು. ಅಭ್ಯರ್ಥಿಗಳು ಸದರಿ ಪರೀಕ್ಷೆಯಲ್ಲಿ ಉತ್ತೀರ್ಣ / ಅನುತ್ತೀರ್ಣದ ತೀರ್ಮಾನವು ಸಮಿತಿಯ ಅಂತಿಮ ನಿರ್ಧಾರಕ್ಕೆ ಒಳಪಟ್ಟಿರುತ್ತದೆ. ಅರ್ಹತೆಯನ್ನು ಯಾವುದೇ ವೈದ್ಯಕೀಯ ಪ್ರಮಾಣ ಪತ್ರದ ಆಧಾರದ ಮೇಲೆ ಪರಿಗಣಿಸಲಾಗುವುದಿಲ್ಲ. ದೈಹಿಕ ಸಾಮರ್ಥ್ಯ, ದೇಹದಾರ್ಢ್ಯತೆ ಹಾಗೂ ದೈಹಿಕ ಅರ್ಹತೆ ಪರೀಕ್ಷೆ ಪೂರ್ಣಗೊಂಡ ನಂತರ ಸಂಬಂಧಪಟ್ಟ ದಾಖಲೆಗೆ ಅಭ್ಯರ್ಥಿಗಳು ತಮ್ಮ ಸಹಿ ಹಾಕಬೇಕು.**